

# ವಾಯುವಿಹಾರ

■ ಫ್ರೆಂಚ್ ಮೂಲ: **ಫ್ರಾಂಕ್ ರೋಜರ್**
■ ಅನುವಾದ: **ಸೀಮಾ ಕುಲಕರ್ಣಿ**
ಕಲೆ: ಭಾಸ್ಕರ್

‘ಅದೋ ಆ ವ್ಯಕ್ತಿ ಮತ್ತೆ ವಾಯುವಿಹಾರಕ್ಕೆ ಹೊರಟಿದ್ದಾನೆ’ ಎಂದು ಮೋರಿಸ್ ಕಿಟಕಿಯಿಂದ ಹೊರಗೆ ನೋಡುತ್ತಾ ಹೇಳಿದನು. ‘ಆತ ತನ್ನ ನಾಯಿಯನ್ನು ಅಡ್ಡಾಡಿಸಲು ಹೋಗುತ್ತಿದ್ದಾನೆ. ನಾನು ಅವನನ್ನು ದಿನಕ್ಕೆ ಮೂರು ಬಾರಿ ನಿಗದಿತ ಸಮಯದಲ್ಲಿ ನೋಡುತ್ತೇನೆಂದರೆ ನಂಬಬಲ್ಲೆಯಾ? ಮನೆಯಲ್ಲಿ ಸಾಕಿದ ನಾಯಿಯಿದ್ದರೆ ಇದು ಸಾಮಾನ್ಯ ಎಂದು ಅವನ ಪತ್ನಿ ಜೆಸ್ಸಿಕಾ ತನ್ನ ಲ್ಯಾಪ್‌ಟಾಪಿನಿಂದ ಮುಖ ಮೇಲಕ್ಕೆತ್ತಿ ನೋಡುತ್ತಾ ಹೇಳಿದಳು. ನಾಯಿಯನ್ನು ದಿನದಲ್ಲಿ ಹಲವಾರು ಬಾರಿ ಹೊರಗೆ ಅಡ್ಡಾಡಿಸಲು ಕರೆದೊಯ್ಯಬೇಕಾಗುತ್ತದೆ’.

‘ಹೌದು, ಆದರೆ ನಾವು ನಿಜವಾದ ನಾಯಿಯ ಬಗ್ಗೆ ಮಾತನಾಡುತ್ತಿಲ್ಲವಲ್ಲ’ ಎಂದು ಮೋರಿಸ್ ತಟ್ಟನೆ ಉತ್ತರಿಸಿದ. ಕಿಟಕಿಯಿಂದ ತುಂಬಾ ದೂರದಲ್ಲಿ ಕುಳಿತಿದ್ದ ಜೆಸ್ಸಿಕಾಗೆ ಸರಿಯಾಗಿ ಕಾಣಿಸಲೆಂದು ಆ ವ್ಯಕ್ತಿಯತ್ತ ಬೆರಳು ಮಾಡಿ ತೋರಿಸಿದನು. ‘ಅದು ರೊಬೋಟ್ ನಾಯಿ. ನಿಜವಾದ ನಾಯಿಗಳು ಈಗ ನೋಡಲು ಕೂಡ ಸಿಗುವುದಿಲ್ಲವೆನ್ನುವುದು ನಿನಗೂ ತಿಳಿದ ವಿಷಯ’.

ಜೆಸ್ಸಿಕಾ ನಿಟ್ಟುಸಿರುಬಿಟ್ಟು, ‘ನಿಜ, ಆದರೆ ಜನರು ಒಂಟಿಯಾಗಿರುವುದರಿಂದ ಅವರಿಗೆ ಸಂಗಾತಿಯ ಅಗತ್ಯವಿರುತ್ತದೆ. ಹಾಗಾಗಿ ಅವರು ರೊಬೋಟ್ ನಾಯಿ, ಇಲ್ಲ ಬೆಕ್ಕು ಅಥವಾ ಇನ್ನಾವುದೋ ಸಾಕುಪ್ರಾಣಿಯನ್ನು ಖರೀದಿಸುತ್ತಾರೆ. ನಿಜವಾದ ಸಾಕುಪ್ರಾಣಿಗಳು ಇತ್ತಿತ್ತಲಾಗಿ ಎಲ್ಲಿಯೂ ಸಿಗುವುದಿಲ್ಲವಾದ್ದರಿಂದ ಇನ್ನೇನು ಮಾಡಲು ಸಾಧ್ಯ?’

‘ನೀನು ಹೇಳುವುದರಲ್ಲಿ ಅರ್ಥವಿದೆ’ ಎನ್ನುತ್ತ ಬೀದಿಯತ್ತ ನೋಡುತ್ತಿದ್ದ ಮೋರಿಸ್‌ಗೆ ಅದೇನೋ ತೋಚಿದಂತೆ ಆತ ಜೆಸ್ಸಿಕಾಳತ್ತ ತಿರುಗಿ, ‘ಆ ನಾಯಿ ಏನು ಕರಾಮತ್ತು ಮಾಡಿದೆ ಅಂತ ನೀನು ನೋಡಬೇಕಿತ್ತು! ಆ ನಾಯಿಯ ಮಲದ ರಾಶಿಯನ್ನು ನೋಡು! ರೊಬೋಟ್ ನಾಯಿಗಳು ಮಲವನ್ನೇಕೆ ವಿಸರ್ಜಿಸಬೇಕೆಂದು ಹೇಳಬಲ್ಲೆಯಾ? ಇದಕ್ಕೇನಾದರೂ ಅರ್ಥವಿದೆಯೇ?’

‘ಹೌದು ಹೌದು’, ಜೆಸ್ಸಿಕಾ ತನ್ನ ಲ್ಯಾಪ್‌ಟಾಪನ್ನು ಪಕ್ಕಕ್ಕೆ ಇಡುತ್ತಾ ಹೇಳಿದಳು. ಮೋರಿಸ್‌ನ ಅಂತ್ಯವಿಲ್ಲದ ತಕರಾರುಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದೇನೆ ಎಂದೆನಿಸಿತವಳಿಗೆ. ಅದಕ್ಕವಳು ಈಗಾಗಲೇ ಒಗ್ಗಿಕೊಂಡಿದ್ದಳಾದರೂ ಯಾಕೋ ಕಿರಿಕಿರಿಯೆನ್ನಿಸಿತು. ಹಾಗೆ ಮಾಡುವುದರಿಂದ ರೊಬೋಟ್ ನಾಯಿಗಳು ಹೆಚ್ಚು ನೈಜವೆನ್ನಿಸುತ್ತವೆ. ನಿಜವಾದ ನಾಯಿಯ ಬದಲಿಗೆ ರೊಬೋಟ್ ನಾಯಿಯನ್ನು ಸಾಕುಪ್ರಾಣಿಯಾಗಿಟ್ಟುಕೊಳ್ಳುವುದಾದರೆ, ಕಡಿಮೆ ಗಮನ ಸೆಳೆಯುವ ಅಂಶಗಳನ್ನೂ ಒಳಗೊಂಡಂತೆ ಅದೊಂದು ಪರಿಪೂರ್ಣ ಸಾಕುಪ್ರಾಣಿಯಾಗಿರಬೇಕು. ತೋರಿಕೆಗೆ ಮಾತ್ರ ಸಾಕುಪ್ರಾಣಿಯನ್ನು ಹೋಲುವ ಯಾವ ಕೃತಕ ಪ್ರಾಣಿಗಳನ್ನೂ ಜನರು ಇಷ್ಟಪಡುವುದಿಲ್ಲ. ರೊಬೋಟ್ ಸಾಕುಪ್ರಾಣಿಗಳನ್ನು ತಯಾರಿಸುವ ಉದ್ಯಮದ ಹಿಂದಿನ ಸಂಪೂರ್ಣ ಉದ್ದೇಶವೇ ಇದು.

ತಾವು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಜನರು ಮಲದ ರಾಶಿಗಳನ್ನು ಪೇರಿಸುವ ದರಿದ್ರ ರೊಬೋಟ್ ನಾಯಿಗಳನ್ನು ಖರೀದಿಸಲು ಮತ್ತು ಅವನ್ನು ಸ್ವಚ್ಛಗೊಳಿಸಲು ಖರ್ಚುಮಾಡುತ್ತಾರೆ! ಇಂಥ ಜನರನ್ನು ಅರ್ಥಮಾಡಿಕೊಳ್ಳುವುದು ಕಷ್ಟ, ಮೋರಿಸ್ ತಲೆ ಅಲ್ಲಾಡಿಸಿದ.

‘ಇದೊಂದು ರೀತಿಯ ಹತಾಶ ಭಾವುಕತೆ. ವಾಸ್ತವಿಕತೆಯು ಮತ್ತೇನೋ ಎಂಬ ಭ್ರಮೆಯಲ್ಲಿರುವವರು. ಜೆಸ್ಸಿಕಾ ಮಧ್ಯೆ ಬಾಯಿ ಹಾಕಿ, ದೂರುವುದನ್ನು ನಿಲ್ಲಿಸಲಾರೆಯಾ?’

‘ಕೇಳಿ ಕೇಳಿ ಬೇಸತ್ತಿದ್ದೇನೆ. ನಾನು ದೂರುತ್ತಿಲ್ಲ’ ಮೋರಿಸ್ ಪ್ರತಿವಾದಿಸಿದ.

‘ಹಿಂದಿರುಗಲಾರದ ಹಳೆಯ ದಿನಗಳನ್ನು ಮರಳಿ ತರಲು ಕೆಲವರು ಏಕಿಷ್ಟು ಕಷ್ಟಪಡುತ್ತಿದಾರೆಂದು ನನಗೆ ಅರ್ಥವಾಗುತ್ತಿಲ್ಲ, ಆದರೆ ಸಾಕು’ ಜೆಸ್ಸಿಕಾಳ ಧ್ವನಿ ಏರಿತ್ತು.

‘ಸಾಕಾಗಿದೆ ಮೋರಿಸ್! ನನಗಿನ್ನು ಸಹಿಸಲು ಸಾಧ್ಯವಿಲ್ಲ. ನನಗೆ ಸ್ವಲ್ಪ ಶಾಂತಿ ಬೇಕು’, ಆಕೆ ರಿಮೋಟ್ ಕಂಟ್ರೋಲನ್ನೆತ್ತಿಕೊಂಡು, ಮೋರಿಸ್‌ನತ್ತ ತೋರಿ ಅವನನ್ನು ನಿಷ್ಕ್ರಿಯಗೊಳಿಸಿದಳು.

ವಾಸ್ತವಿಕತೆಗೆ ಹೆಚ್ಚು ಹತ್ತಿರವಿದ್ದ, ಕಲಹಪ್ರಿಯ ಆಂಡ್ರಾಯ್ಡ್ ಗಂಡನಿರುವುದು ಸಂತೋಷದಾಯಕವಾಗಿತ್ತೇನೋ ನಿಜ ಆದರೆ ಅವನನ್ನು ಎಲ್ಲಾ ಸಮಯದಲ್ಲೂ ಕ್ರಿಯಾಶೀಲನನ್ನಾಗಿ ಇಡುವ ಅವಶ್ಯಕತೆಯಿರಲಿಲ್ಲವಲ್ಲ!

ಪ್ರತಿಕ್ರಿಯಿಸಿ: **feedback@sudha.co.in**